ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :

ಅ) ರಾಜ್ಯದ ಒಟ್ಟು ಭೂ ಕಂದಾಯವು ವರ್ಷಕ್ಕೆ ರೂ. 9.75 ಕೋಟಿಗಳು ಇರುತ್ತದೆ.

ಆ) ಇಲ್ಲಾ.

ಇ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

**ರಾಜ್ಯದಲ್ಲಿರುವ ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರ ಹಾಗೂ ಪಶು ಆಸ್ಪತ್ರೆಗಳಲ್ಲಿರುವ ಹುದ್ದೆಗಳ ಭರ್ತಿ**

996 (1429) ಶ್ರೀ ಬಸವರಾಜ ರಾಯರೆಡ್ಡಿ (ಯಲಬುರ್ಗ) : ಮಾನ್ಯ ಪಶುಸಂಗೋಪನೆ ಮತ್ತು ಪಶುವೈದ್ಯ ಸೇವಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರ ಹಾಗೂ ಆಸ್ಪತ್ರೆಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು)

ಆ) ವಿವಿಧ ವರ್ಗದ ಹುದ್ದೆಗಳು ಎಷ್ಟು ಖಾಲಿ ಇದೆ;

ಇ) ಹಾಗಿದ್ದಲ್ಲಿ ಇದನ್ನು ತುಂಬಲು ತೆಗೆದುಕೊಂಡಿರುವ ಕ್ರಮವೇನು; ಯಾವಾಗ ತುಂಬಲಾಗುವುದು?

ಶ್ರೀ ಬಸವರಾಜ್ ಪಾಟೀಲ್ (ಪಶುಸಂಗೋಪನೆ ಮತ್ತು ಪಶುವೈದ್ಯ ಸೇವಾ ರಾಜ್ಯ ಸಚಿವರು) :

ಅ) 1143 (ಜಿಲ್ಲಾವಾರು ಪಟ್ಟಿ ಲಗತ್ತಿಸಿದೆ)

ಆ) ದರ್ಜೆ 'ಎ' 17

ದರ್ಜೆ 'ಬಿ' 80

ದರ್ಜೆ 'ಸಿ' 963

ದರ್ಜೆ 'ಡಿ' 695

ಇ) ದರ್ಜೆ 'ಎ' : ಇಲಾಖಾ ಬಡ್ತಿ ಸಮಿತಿಯು ಖಾಲಿ ಇರುವ ಅಪರ ನಿರ್ದೇಶಕರು, ಜಂಟಿ ನಿರ್ದೇಶಕರು ಮತ್ತು ಉಪ ನಿರ್ದೇಶಕರ ಹುದ್ದೆಗಳನ್ನು ತುಂಬಲು ಕ್ರಮ ಕೈಗೊಳ್ಳಲಾಗಿದೆ.

ದರ್ಜೆ 'ಬಿ' : 50 ಪಶುವೈದ್ಯ ಅಧಿಕಾರಿಗಳ ಹುದ್ದೆಗಳನ್ನು ತುಂಬಲು ಲೋಕ ಸೇವಾ ಆಯೋಗಕ್ಕೆ ಪತ್ರ ಬರೆಯಲಾಗಿದೆ. ಇನ್ನುಳಿದ 30 ಹುದ್ದೆಗಳನ್ನು ವಿಶೇಷ ನೇಮಕಾತಿ ನಿಯಮಾವಳಿ ಮೇರೆಗೆ ತುಂಬಲು ಕಾದಿರಿಸಲಾಗಿದೆ.

ದರ್ಜೆ 'ಸಿ' : ಇತರೆ ಇಲಾಖೆಯಲ್ಲಿ ಎರವಲು ಸೇವೆಯಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿ ವರ್ಗದವರನ್ನು ವಾಪಸ್ಸು ಪಡೆದು ಖಾಲಿ ಇರುವ ಜಾಗಗಳಲ್ಲಿ ತುಂಬಲಾಗುತ್ತಿದೆ. ಅಲ್ಲದೆ ಅನುಕಂಪಾರ್ಥದ ಆಧಾರದ ಮೇಲೆ ಸಹ ನೇಮಕ ಮಾಡಲಾಗುತ್ತಿದೆ.

ಇಲಾಖಾ ನೇಮಕಾತಿ ಸಮಿತಿಯ ಮುಖಾಂತರ ತರಬೇತಿ ಹೊಂದಿದ ಪಶುವೈದ್ಯ ಪರೀಕ್ಷಕರು ಮತ್ತು ಪಶುವೈದ್ಯ ಸಹಾಯಕರನ್ನು ಖಾಲಿ ಹುದ್ದೆಗೆ ನೇಮಕ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ದರ್ಜೆ 'ಡಿ' : ಅನುಕಂಪಾರ್ಥ ಆಧಾರದ ಮೇಲೆ, ದಿನಗೂಲಿ ನೌಕರರಿಂದ ಹಾಗೂ ಮಾಸಿಕ ವೇತನ ಸಿಬ್ಬಂದಿಗಳನ್ನು ಈ ಖಾಲಿ ಹುದ್ದೆಗಳಲ್ಲಿ ತುಂಬಲಾಗುವುದು.

ಈ ಮೇಲ್ಕಂಡ ಎಲ್ಲಾ ದರ್ಜೆಯ ಹುದ್ದೆಗಳನ್ನು ಹಂತ ಹಂತವಾಗಿ ತುಂಬಲು ಕ್ರಮ ಕೈಗೊಳ್ಳಲಾಗುತ್ತಿದೆ.

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1429ಕ್ಕೆ ಅನುಬಂಧ**

| ಕ್ರ.ಸಂ. | ಜಿಲ್ಲೆ | ಪಶು ಆಸ್ಪತ್ರೆ | ಪ್ರಾಥಮಿಕ ಪಶುಚಿಕಿತ್ಸಾಲಯ |
|---|---|---|---|
| 1) | ಬೆಂಗಳೂರು ನಗರ | 7 | 14 |
| 2) | ಬೆಂಗಳೂರು ಗ್ರಾಮಾಂತರ | 8 | 37 |
| 3) | ಚಿತ್ರದುರ್ಗ | 9 | 63 |
| 4) | ಕೋಲಾರ | 13 | 48 |
| 5) | ತುಮಕೂರು | 10 | 58 |
| 6) | ಶಿವಮೊಗ್ಗ | 9 | 68 |
| 7) | ಮೈಸೂರು | 13 | 69 |
| 8) | ಹಾಸನ | 8 | 53 |
| 9) | ಚಿಕ್ಕಮಗಳೂರು | 7 | 36 |
| 10) | ದಕ್ಷಿಣ ಕನ್ನಡ | 9 | 66 |
| 11) | ಕೊಡಗು | 5 | 17 |
| 12) | ಮಂಡ್ಯ | 7 | 26 |
| 13) | ಗುಲ್ಬರ್ಗಾ | 10 | 73 |
| 14) | ಬಳ್ಳಾರಿ | 8 | 39 |
| 15) | ಬೀದರ್ | 5 | 18 |
| 16) | ರಾಯಚೂರು | 9 | 35 |
| 17) | ಬೆಳಗಾಂ | 11 | 74 |
| 18) | ಬಿಜಾಪುರ | 11 | 59 |
| 19) | ಧಾರವಾಡ | 18 | 64 |
| 20) | ಉತ್ತರ ಕನ್ನಡ | 10 | 39 |
| | ಒಟ್ಟು | 187 | 956 |